
ಕಥೆ



**ಕೆ. ಅರವಿಂದ ಮಿತ್ರ**

ಕಲೆ: ಜಯಶ್ರೀ ಶರ್ಮ

# ಬಸವ ಕಲ್ಯಾಣ



ಮಲ್ಲಿಕಾರ್ಜುನನಿಗೆ ತನ್ನ ದೂರದ ಸಂಬಂಧಿ ಬಿರಾದಾರ ತೀರಿಕೊಂಡಿದ್ದು ಚಿಂತೆಗೀಡು ಮಾಡಿತ್ತು. ಹಾಲಳ್ಳಿಯ ಪಂಚಾಯಿತಿ ಅಧ್ಯಕ್ಷನಾಗಿದ್ದ ಕಾಲದಲ್ಲಿ ತಿನ್ನಬಾರದ ರೀತಿಯಲ್ಲಿ ಪಂಚಾಯಿತಿಯ ದುಡ್ಡು ನುಂಗಿ, ಮಲ್ಲಿಕಾರ್ಜುನನಿಗೆ ಯಾವುದೇ ಕಮಿಷನ್ ಕೆಲಸ ನೀಡದೆ ಬಿರಾದಾರ ಹೃದಯಾಘಾತದಿಂದ ತೀರಿಕೊಂಡಿದ್ದ. ಇದು ಮಲ್ಲಿಕಾರ್ಜುನನನ್ನು ಸಾಲಕ್ಕೆ ದೂಡಿದ್ದಲ್ಲದೆ, ಖಾಲಿ ಇರುವ ಅಧ್ಯಕ್ಷ ಸ್ಥಾನಕ್ಕೆ ಪಂಚಾಯಿತಿಯ ಹಾಲಿ ಸದಸ್ಯೆಯಾದ ತನ್ನ ಹೆಂಡತಿಯನ್ನು ಸ್ಥಾಪಿಸುವ ಮಾರ್ಗ ಹೇಗೆ ಎಂಬುದು ಪ್ರಶ್ನೆಯಾಗಿತ್ತು. ಪಂಚಾಯಿತಿ ರಾಜಕಾರಣಕ್ಕೆ ಮಲ್ಲಿಕಾರ್ಜುನ ಹೊಸಬನೇನಲ್ಲ. ಎರಡು ಬಾರಿ ಸದಸ್ಯನಾಗಿ, ಒಮ್ಮೆ ಅಧ್ಯಕ್ಷನಾಗಿ ಹೆಸರು ಕೆಡಿಸಿಕೊಂಡಿದ್ದಷ್ಟೇ ಅವನ ಸಾಧನೆ. ಅಧ್ಯಕ್ಷನಾಗಿದ್ದಾಗ ಬೀದರ್ ಇಂದ ಇಪ್ಪತ್ತು- ಮೂವತ್ತು ಕಿಲೋಮೀಟರ್ ದೂರದಲ್ಲಿದ್ದ ಹಾಲಳ್ಳಿಗೆ ನಿತ್ಯವೂ ಹೋಗದೆ, ತಾನು ನಡೆಸುತ್ತಿದ್ದ ಖಾನಾವಳಿಯಲ್ಲಿಯೇ ಪಂಚಾಯಿತಿ ರಾಜಕಾರಣ ಮಾಡುವನೆಂಬ ಖ್ಯಾತಿ ಪಡೆದಿದ್ದ. ಸರಿಯಾದ ಸಂದರ್ಭದಲ್ಲಿ ಇದರ ಸುಳಿವು ತಿಳಿದ ಮೇಲೆ, ಅವರಿವರ ಕಾಲು ಹಿಡಿದು, ತಾನು ಹಿಂದೆ ಸರಿದು ಹೆಂಡತಿ ಚೆನ್ನಮ್ಮಳನ್ನು ಸದಸ್ಯೆಯನ್ನಾಗಿ ಮಾಡಿದ್ದ.

ಇಂಥ ಟೈಮಿನಲ್ಲಿ ತನ್ನ ಹೆಂಡತಿ ಗೆದ್ದರೆ, ಮನರೇಗಾ ನಿಧಿಯನ್ನು ಟೆಂಡರ್ ಬದಲು ಕೊಟೇಶನ್ ಮಾಡಿ, ಹೆಚ್ಚು ಕಮಿಷನ್ ಪಡೆದು ಸಾಲವನ್ನು ತೀರಿಸಬಹುದೇ ಎಂಬ ಯೋಚನೆ ದಟ್ಟವಾಯಿತು. ಹಾಲಳ್ಳಿಯ ಪಂಚಾಯಿತಿಯಲ್ಲಿರುವುದು ಕೇವಲ ಹತ್ತು ಸದಸ್ಯರು. ಅಧ್ಯಕ್ಷನಾಗಲು ಅವರಲ್ಲಿ ಆರು ಓಟು ಸಾಕು. ಇವನ ಹೆಂಡತಿಯ ಓಟು ಬಿಟ್ಟರೆ, ಎರಡು ಇವನ ಬೆಂಬಲಿಗರದ್ದು. ಆದರೆ ಉಳಿದ ಏಳು ಓಟುಗಳು ಬೇರೆ ಜಾತಿಯವರದ್ದಾಗಿದ್ದು, ಅನೇಕ ಸಂದರ್ಭಗಳಲ್ಲಿ ಅವರಿಗೂ ಇವನಿಗೂ ಮುನಿಸಿನ ಮಾತು ಹತ್ತಿ, ಆ ಓಟುಗಳು ಇವನ ಹೆಂಡತಿಯ ಪರವಾಗಿ ಬೀಳುವುದು ಅನುಮಾನವೆಂದಾಗಿತ್ತು. ಹಾಗೆ ನೋಡಿದರೆ ಇವನ ಬಾಲ್ಯ ಸ್ನೇಹಿತ ಶರಣಪ್ಪ, ಪಂಚಾಯಿತಿಯ ಪ್ರಭಾವಿ ಸದಸ್ಯ. ದುಡ್ಡುಕಾಸಿನ ಕಾರಣ ಅಧ್ಯಕ್ಷನಾಗದೇ ಇದ್ದರೂ, ಎಲ್ಲಾ ಸದಸ್ಯರನ್ನು ಪ್ರಭಾವಿಸುವ ಆಸಾಮಿಯಾಗಿದ್ದ. ಅವನನ್ನು ಪುಸಲಾಯಿಸಿದರೆ, ಇರುವ ಓಟುಗಳಲ್ಲಿ ಕನಿಷ್ಠ ಮೂರು ಹೆಂಡತಿಗೇ ಬೀಳಬಹುದು ಎಂದುಕೊಂಡ.

ಚೆನ್ನಮ್ಮ ಬಸವೇಶ್ವರರ ಫೋಟೊಗೆ ಶರಣುಗೈಯ್ಯುವಲ್ಲಿ ಮಲ್ಲಿಕಾರ್ಜುನ ಉಳಿದ ಓಟುಗಳನ್ನು ಖರೀದಿಸುವ ದಾರಿಯಾವುದೆಂದು ಕೇಳಿದನು. 'ಮನಿಲಿರೋ ಬೆಳ್ಳಿಬಂಗಾರ ಮಾರಿದ್ರೆ ಹತ್ತು ಲಕ್ಷದವರೆಗೆ ಸಿಗಬೋದು, ಬೇರೆ ಜಾತಿಯಿಂದ ನಮಗ್ ಬೇಕಾಗಿದ್ದು ಮೂರೇ ಓಟು ಅದ. ಓಟಿಗೆ ಎರಡು ಲಕ್ಷ ಅಂದ್ರೂನೂ ಇಷ್ಟು ಸಾಕಾಗ್ತದ. ಮುಂದ ಗೆದ್ಮೇಲೆ ನಮ್ಮವರಿಗೆ ಕೊಟೇಶನ್ ಮೇಲೆ ಕಮಿಷನ್